**ಕರ್ನಾಟಕ ಅರಣ್ಯ ಇಲಾಖೆ**

ಸಂಖ್ಯೆ:ಎ7/ಎಲ್ಎನ್ಡಿ/ಗ್ರೀನ್‌ಕೋ/ಸಿಆರ್– /2020–21

ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ:07–09–2020

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಘಟಪ್ರಭಾ ವಿಭಾಗ,
ಗೋಕಾಕ

ವಿಷಯ: Diversion of 160.40 ha, of forest Land for Construction of 1260 MW Standalone pumped Storage Project being development by M/S Greenko Solar Energy Private Ltd. (GSEPL) Proposal No. FP/KA/HYD/37723/2018 reg.

ಉಲ್ಲೇಖ:1) ನಿಮ್ಮ ಕಛೇರಿ ಪತ್ರ ಸಂಖ್ಯೆ: ಬಿ2/ಭೂಮಿ/ಗ್ರೀನ್‌ಕೋ/ಎಫ್.ಸಿ/2020–21 ದಿನಾಂಕ: 30–06–2020.

2) ಈ ಕಛೇರಿ ಪತ್ರ ಸಂಖ್ಯೆ: ಎ7/ಎಲ್.ಎನ್.ಡಿ./ಗ್ರೀನ್‌ಕೋ/ಸಿಆರ್– /2020–21 ದಿನಾಂಕ: 17–07–2020.

3) ನಿಮ್ಮ ಕಛೇರಿ ಪತ್ರ ಸಂಖ್ಯೆ: ಬಿ2/ಭೂಮಿ/ಗ್ರೀನ್‌ಕೋ/ಎಫ್.ಸಿ/2020–21/518(1) ದಿನಾಂಕ: 29–07–2020.

** * **

ಉಲ್ಲೇಖಿತ (1)ರ ಪತ್ರದಡಿಯಲ್ಲಿ OSMFCP ಆನಲೈನ್‌ನಲ್ಲಿ ಮೇಲಿನ ವಿಷಯದ ಕುರಿತು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ನೋಡಲಾಗಿ ಸವದತ್ತಿ ವಲಯದ ಕಾರ್ಲಕಟ್ಟಿ, ಚಕ್ರಗೇರಿ ಹಾಗೂ ಕಾಗಿಹಾಳ ಗ್ರಾಮದ ಅರಣ್ಯ ಪ್ರದೇಶದಲ್ಲಿ ಅಳವಿನಂಚಿನಲ್ಲಿರುವ ತೋಳುಗಳು ಇರುವುದಾಗಿ ಅವುಗಳ ಸಂರಕ್ಷಣಾ ದೃಷ್ಟಿಯಿಂದ ಹಾಗೂ ಮಲಪ್ರಭಾ ನೀರಾವರಿ ಯೋಜನೆಯಿಂದ ನಿರಾಶ್ರಿತರಾದ ಧೂಪದಾಳ ಮತ್ತು ಯಕ್ಕುಂಡಿ ಗ್ರಾಮದ ಗ್ರಾಮಸ್ಥರಿಗೆ ಕಾಗಿಹಾಳ ಮತ್ತು ಕಾರ್ಲಕಟ್ಟಿ ಗ್ರಾಮದ ಅರಣ್ಯ ಪ್ರದೇಶದಲ್ಲಿ 1020 ಎಕರೆ ಪ್ರದೇಶವನ್ನು ಹಂಚಿಕೆ ಮಾಡಿದ್ದು ಈ ಬಗ್ಗೆ ಸಾರ್ವಜನಿಕರಿಂದ ಸದರಿ ಪ್ರಸ್ತಾವನೆಗೆ ಆಕ್ಷೇಪಣೆಯಿದ್ದು ಈ ಹಿನ್ನೆಲೆಯಲ್ಲಿ ಸದರ ಪ್ರಸ್ತಾವನೆಯನ್ನು ತಿರಸ್ಕರಿಸಬಹುದಾಗಿದೆಂದು ಅಭಿಪ್ರಾಯ ವ್ಯಕ್ತಪಡಿಸಿ ಪ್ರಸ್ತಾವನೆ ಸಲ್ಲಿಸಿರುತ್ತೀರಿ.

ಮುಂದುವರೆದು, ಅಳವಿನಂಚಿನಲ್ಲಿರುವ ತೋಳುಗಳನ್ನು ಸಂರಕ್ಷಣೆ ಮಾಡುವ ದೃಷ್ಟಿಯಿಂದ ಅವುಗಳ ಇರುವಿಕೆ ಬಗ್ಗೆ ಸೂಕ್ತ ಪ್ರದೇಶದಲ್ಲಿ ಕ್ಯಾಮಾರಾ ಟ್ರ್ಯಾಪ್‌ಗಳನ್ನು ಅಳವಡಿಸಿ ಅವುಗಳ ಚಲನ–ವಲನಗಳ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಅಲ್ಲದೇ ಧೂಪದಾಳ ಮತ್ತು ಯಕ್ಕುಂಡಿ ಗ್ರಾಮದ ಗ್ರಾಮಸ್ಥರ ಆಕ್ಷೇಪಣೆ ಬಗ್ಗೆ ಬೆಳಗಾವಿ ಜಿಲ್ಲಾಧಿಕಾರಿಗಳಿಂದ ಎಫ್‌ಆರ್‌ಎ ನಮೂನೆ–1ರಲ್ಲಿ ದೃಢೀಕೃತ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿದ್ದು ಇರುವುದಿಲ್ಲ ಹಾಗೂ ಸದರ ಯೋಜನೆಗೆ ಅನುಷ್ಠಾನಗೊಳಿಸುವ ಬಗ್ಗೆ ಸಾರ್ವಜನಿಕರು ಜನಪ್ರತಿನಿಧಿಗಳಿಗೆ (ಎಂ.ಎಲ್.ಎ) ಆಹ್ವಾಲು ಸಲ್ಲಿಸಿದ್ದು ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಸದರ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಆಕ್ಷೇಪಣಾ ವರದಿಯನ್ನು, (Govt of India MoEFCC ರವರ ಪತ್ರ ದಿನಾಂಕ: 13–06–2019ರ ಪ್ರಕಾರ) ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ರವರಿಂದ no altemative suitable non-forest land ಎಂಬ ದೃಢೀಕರಣ ಪತ್ರವನ್ನು ಪಡೆದು ಉಪಯೋಗಿ ಸಂಸ್ಥೆಯವರು ಸಲ್ಲಿಸಿದ್ದು ಇರುವುದಿಲ್ಲ.

ಕಾರಣ, ಈ ಬಗ್ಗೆ ಉಪಯೋಗಿ ಸಂಸ್ಥೆಯವರಿಂದ ಅಗತ್ಯ ದಾಖಲೆಗಳನ್ನು ಪಡೆದು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸುತ್ತಾ ಸದರ ಪ್ರಸ್ತಾವನೆಯನ್ನು OSMFCP ಆನಲೈನ್‌ನಲ್ಲಿ ಮರಳಿಸಲಾಗಿದೆ.

ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ

GKK DCF_Ltr_A7_20-21 Asha.doc 8